(3) ತಿರುಪತಿಯಲ್ಲಿ ಕರ್ನಾಟಕದ ಯಾತ್ರಿಕರಿಗೆ ಆಗಬೇತ್ತಿರುವ ಅನಾನುಕೂಲದ ಬಗ್ಗೆ.

ಶ್ರೀ ಆರ್. ರೋಷನ್ ಬೇಗ್.—ಮಾನ್ಯ ಅಧ್ಯಕ್ಷರೆ, ತಿರುವಂಲ ತಿರುಪತಿಗೆ ಕರ್ನಾಟಕದಿಂದ ಹೋಗತಕ್ಕ ಯಾತ್ರಾರ್ಥಿಗಳಿಗೆ ಕರ್ನಾಟಕ ಛತ್ರದಲ್ಲಿ ವಸತಿ ಸೌಕರ್ಯ ಒದಗಿಸಿಕೊಡುವ ವಿಚಾರದಲ್ಲಿ ಆಗುತ್ತಿರುವ ತೊಂದರೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮಾಯಿ (ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು).—ಮಾನ್ಯ ಅಧ್ಯಕ್ಷರೆ, ತಿರುವಂಲ-ತಿರುಪತಿಯಲ್ಲಿರುವ ಕರ್ನಾಟಕ ರಾಜ್ಯಛತ್ರದಲ್ಲಿ ಕರ್ನಾಟಕದಿಂದ ಹೋಗುತ್ತಿರುವ ಯಾತ್ರಾರ್ಥಿಗಳಿಗೆ ಆಧ್ಯತೆ ಮೇಲೆ ಕೊಠಡಿಗಳನ್ನು ಕೊಡುತ್ತಿಲ್ಲವೆಂದು ಹಾಗೂ ತೊಂದರೆ ಕೊಡುತ್ತಿದ್ದಾರೆಂದು ಶಾಸಕ ಶ್ರೀ ರೋಷನ್ ಬೇಗ ರವರು ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡಂತೆ ಉತ್ತರ ಕೊಡಬಯಸುತ್ತೇನೆ.

ತಿರುವಂಲ-ತಿರುಪತಿಯಲ್ಲಿರುವ ಕರ್ನಾಟಕ ರಾಜ್ಯಛತ್ರ ಒಂದು ಮುಜರಾಯಿ ಸಂಸ್ಥೆಯಾಗಿರುತ್ತದೆ. ಹಾಗೂ ಈ ಇಲಾಖೆಯ ಆಡಳಿತದಲ್ಲಿದೆ. ಈ ಛತ್ರದಲ್ಲಿ ಕೆಳಿಗೆ ನಮೂದಿಸಿದ ವಸತಿ ಗೃಹಗಳಿವೆ.

		ಪ್ರತಿ ದಿನದ ಬಾಡಿಗೆ	
೧.	ಅತಿಥಿ ಗೃಹ	೮ ಕೊಠಡಿ	(ಪ್ರತಿ ರೂಮಿಗೆ ೨೫ ರಿಂದ ೩೫ ರೂ.ಗಳು)
೨.	ಪ್ರವಾಸೀಸೌಧ	೫೮ ಕೊಠಡಿ	(ಪ್ರತಿ ರೂಮಿಗೆ ೨೫ರೂ. ಮತ್ತು ೫೦ ರೂಪಾಯಿಯ ಎರಡು ಬಗೆಯ ಕೊಠಡಿ ಇವೆ.)
೩,	ಕರ್ನಾಟಕ ಕಲ್ಯಾಣ ಮಂಟಪ	೨೮ ಕೊಠಡಿ	(ಪ್ರತಿ ರೂಮಿಗೆ ೪೦ರೂ.ಗಳು)
೪.	ಕುಠೀರ	೧೦	(ಪ್ರತಿ ಕುಠೀರಕ್ಕೆ ೫೦ ರೂಗಳಿಂದ ೭೫ ರೂ.ಗಳು)

ಪ್ರವಾಸೀಸೌಧದ ೩೨ ಕೊಠಡಿಗಳನ್ನು ಸರ್ಕಾರದ ಆದೇಶದ ಮೇರೆಗೆ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ವಾರ್ಷಿಕ ಎರಡು ಲಕ್ಷ ರೂ. ಗುತ್ತಿಗೆ ಮೇಲೆ ಕೊಡಲಾಗಿದೆ.

ತಿರುಮಲ-ತಿರುಪತಿಗೆ ಭೇಟಿ ನೀಡುವ ಯಾತ್ರಾರ್ಥಿಗಳಲ್ಲಿ ಶೇಕಡ ೪೦ ಭಾಗಕ್ಕಿಂತ ಹೆಚ್ಚು ಯಾತ್ರಾರ್ಥಿಗಳು ಕರ್ನಾಟಕದವರಾಗಿರುತ್ತಾರೆ. ಪ್ರತಿದಿನ ಸುಮಾರು ೧೦ ಸಾವಿರ ಯಾತ್ರಾರ್ಥಿಗಳು ಕರ್ನಾಟಕದಿಂದ ಭೇಟಿ ನೀಡುತ್ತಾರೆ. ಶುಕ್ರವಾರದಿಂದ ಭಾನುವಾರ ಹಾಗೂ ರಜಾ ದಿನಗಳಲ್ಲಂತೂ ಇನ್ನೂ ಹೆಚ್ಚು. ಇಷ್ಟು ಜನರಿಗೆ ಕರ್ನಾಟಕ ಛತ್ರದಲ್ಲಿರುವ ಸುಮಾರು ೬೨ ಕೊಠಡಿಗಳು ಹಾಗೂ ೧೦ ಕುಠೀರ ಬಹಳ ಕಡಿಮೆ. ಪ್ರತಿದಿನ ಸುಮಾರು ೩೦೦ ಜನರಿಗೆ ಈ ವಸತಿ ಗೃಹಗಳಲ್ಲಿ ಅನುಕೂಲ ಮಾಡಬಹುದು. ಆದುದರಿಂದ ಕರ್ನಾಟಕದಿಂದ ಬರುವ ಎಲ್ಲಾ ಯಾತ್ರಾರ್ಥಿಗಳಿಗೆ ವಸತಿ ಸೌಕರ್ಯ ಒದಗಿಸಲು ಸಾಧ್ಯವಾಗುವುದಿಲ್ಲ.

ಮೇಲಿನ ಕಾರಣವಲ್ಲದೇ ಪ್ರವಾಸೀಸೌಧ, ಕರ್ನಾಟಕ ಕಲ್ಯಾಣ ಮಂಟಪ ಹಾಗೂ ಕುಠೀರಗಳನ್ನು ದಾನಿಗಳಿಂದ ಪಂತಿಗೆಯನ್ನು ಪಡೆದು ಕಟ್ಟಲಾಗಿದೆ. ಈ ಯೋಜನೆಯ ನಿಯಮಗಳ ಪ್ರಕಾರ ದಾನಿಗಳಿಗೆ ವರ್ಷದಲ್ಲಿ ೬೦ ದಿನ ಕೊಠಡಿಗಳನ್ನು ಮುಂಪ್ಪತ್ತಾಗಿ ಕೊಡಬೇಕಾಗುತ್ತದೆ. ಈ ದಾನಿಗಳಲ್ಲಿ ಸುಮಾರು ಶೇಕಡ ೨೦ ರಷ್ಟು ಹೊರರಾಜ್ಯದವರಾಗಿದ್ದಾರೆ. ಅವರಿಗೆ ಒಪ್ಪಿಗೆ ಆಗಿರುವ ರೀತಿ ೬೦ ದಿವಸ ಬಿಟ್ಟು ಕೊಡಬೇಕಾಗಿರುವುದರಿಂದ, ಆ ರೀತಿ ಮಾಡಿದಾಗ, ಕರ್ನಾಟದವರು ಈ ಬಗ್ಗೆ ದೂರು ಮಾಡುವುದು ಸಹಜವಾಗಿದೆ.

ಕರ್ನಾಟಕದಿಂದ ಹೋಗುವ ಯಾತ್ರಾರ್ಥಿಗಳು ಕರ್ನಾಟಕ ಅತಿಥಿ ಗೃಹ ಮತ್ತು ಕರ್ನಾಟಕ ಕಲ್ಯಾಣ ಮಂಟಪದೊಳಗಿನ ರೂಮುಗಳನ್ನೇ ಬಯಸುತ್ತಾರೆ. ಕರ್ನಾಟಕ ದವರದೇ ಅತಿಥಿಗೃಹ

ಗಳಲ್ಲಿರುವ ರೂಮುಗಳು ಮತ್ತು ಕಲ್ಯಾಣ ಮಂಟಪದಲ್ಲಿರುವ ರೂಮುಗಳು ಚೆನ್ನಾಗಿ (ಸುಸಜ್ಜಿತವಾದ ಪೀಠೋಪಕರಣಗಳಿಂದ ಕೂಡಿದ್ದಾಗಿರುತ್ತೆ) ಪ್ರವಾಸೀಸೌಧದಲ್ಲಿರುವ ರೂಮುಗಳು ಅಷ್ಟು ಚೆನ್ನಾಗಿ ಇರದ ಕಾರಣ ಯಾತ್ರಾರ್ಥಿಗಳು ಮೇಲ್ಕಾಣಿಸಿದ ರೂಮುಗಳನ್ನು ಬಯಸುವುದು ಸಹಜ. ಸಿಗದೇ ಇದ್ದಾಗ ಈ ತರಹ ದೂರು ಕೊಡುವುದು ಸ್ವಾಭಾವಿಕ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಪ್ರವಾಸೀ ಸೌಧದಲ್ಲಿರುವ ಎಲ್ಲಾ ಕೋಣೆಗಳಿಗೆ ಮತ್ತು ಇತರ ಉತ್ತಮವಾದ ಪೀಠೋಪಕರಣಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಯಾತ್ರಾ ಸ್ಥಳಕ್ಕೆ ಬರುತ್ತಿರುವ ಭಕ್ತರು ಪ್ರತಿದಿನ ಹೆಚ್ಚುತ್ತಿರುವುದನ್ನು ಮನಗಂಡು ಸರ್ಕಾರವು ಇನ್ನೂ ಹೆಚ್ಚಿನ ವಸತಿ ಗೃಹಗಳನ್ನು ಕಟ್ಟಲು ಕ್ರಮ ಕೈಗೊಳ್ಳತ್ತಿದೆ. ಈಗಿರುವ ಕುರೀರಗಳ ಮೇಲೆ ಮಹಡಿ ಕುರೀರವನ್ನು ದಾನಿಗಳ ನಯಾಪೈಸೆಯಂತರ ಕಟ್ಟಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಆರ್. ರೋಷನ್ ಬೇಗ್.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಿಂದ ನಮ್ಮ ಯಾತ್ರಾರ್ಥಿಗಳು ತಿರುಪತಿಗೆ ಹೋಗುತ್ತಾರೆ. ಅಲ್ಲಿ ನಮ್ಮದೇ ಛತ್ರ ಇದೆ, ಇರುವುದಕ್ಕೆ ಅನುಕೂಲ ವಾಗುತ್ತದೆಂದು ಹೋಗುತ್ತಾರೆ. ಆದರೆ ನಮ್ಮ ಛತ್ರದಲ್ಲಿ ಬೇರೆ ರಾಜ್ಯದವರು ಇರುತ್ತಾರೆ. ಈ ಛತ್ರವನ್ನು ನೋಡಿಕೊಳ್ಳುವ ನಮ್ಮ ಸಿಬ್ಬಂದಿ ಏನಿದೆ ಅವರೂ ಕೂಡ ಹಣದ ಆಸೆಗಾಗಿ ನಾವು ಕೇಳಿದರೆ ರೂಮು ಖಾಲಿ ಇಲ್ಲವೆಂದು ಹೇಳುತ್ತಾರೆ. ಇಲ್ಲದಿದ್ದರೆ ಇಷ್ಟು ಹಣ ಕೊಡಿ, ಅಷ್ಟು ಹಣ ಕೊಡಿ, ಸಂಜೆ ಬನ್ನಿ ಬೆಳಿಗ್ಗೆ ಬನ್ನಿ ಎಂದು ಹೇಳಿ ಅನಾವಶ್ಯಕ ತೊಂದರೆ ಕೊಡುತ್ತಾರೆ. ದೇವರನ್ನು ತೋರಿ ಸುವುದಕ್ಕೂ ಹಣವನ್ನು ಕೇಳುತ್ತಾರೆ. ಅದೇ ಆಂಧ್ರದಿಂದ ಬರತಕ್ಕ ಯಾತ್ರಾರ್ಥಿಗಳಿಗೆ ಹೋದ ಕೂಡಲೇ ರೂಮನ್ನು ಕೊಡುತ್ತಾರೆ. ಅವರನ್ನು ತಾವೇ ಕರೆದುಕೊಂಡು ಹೋಗಿ ದೇವರನ್ನು ತೋರಿಸುತ್ತಾರೆ. ಆದರೆ ನಮ್ಮ ಕರ್ನಾಟಕದಿಂದ ಅಲ್ಲಿಗೆ ಹೋದವರಿಗೆ ಆ ಸಿಬ್ಬಂದಿ ಬಹಳ ತೊಂದರೆ ಯನ್ನು ಕೊಡುತ್ತಾರೆ. ಇದರ ಬಗ್ಗೆ ಮಾನ್ಯ ಸಚಿವರು ಏನಾದರೂ ಸೂಕ್ತ ಕ್ರಮವನ್ನು ತೆಗೆದು ಕೊಳ್ಳುತ್ತಾರೆಯೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಕರ್ನಾಟಕದಿಂದ ಹೋಗತಕ್ಕ ಯಾತ್ರಾರ್ಥಿಗಳಿಗೆ ಅಲ್ಲಿನ ಸಿಬ್ಬಂದಿವರ್ಗದವರು ವ್ಯಾಶಸ್ತ್ಯವನ್ನು ಕೊಟ್ಟು ವಸತಿ ಸೌಕರ್ಯವನ್ನು ಒದಗಿಸಿಕೊಡಬೇಕು. ಒಂದು ವೇಳೆ ಅವರು ವಸತಿ ಸೌಕರ್ಯವನ್ನು ಒದಗಿಸಿಕೊಡದೇ ಹೋದಂಥ ಪ್ರಕರಣಗಳು ನಮ್ಮ ಗಮನಕ್ಕೆ ಬಂದರೆ ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಈ ಛತ್ರಕ್ಕೆ ದಾನ ನೀಡಿ ರತಕ್ಕ ದಾನಿಗಳು ಹೊರನಾಡಿನಿಂದ ಬಂದವರಿಗೂ ಅವರು ಕೊಡಲೇ ಬೇಕಾಗುತ್ತದೆ.

ಶ್ರೀ ವಿನಯಕುಮಾರ್ ಸೊರ್ಕೆ.—ಈ ಛತ್ರದಲ್ಲಿ ಹೆಚ್ಚು ಜನರಿಗೆ ಸ್ಥಳಾವಕಾಶವನ್ನು ಒದಗಿಸಿ ಕೊಡುವ ಸಲುವಾಗಿ ಇನ್ನೂ ವಿಸ್ತಾರ ಮಾಡುತ್ತೀರಾ ? ಇದು ನಿಮ್ಮ ಯೋಚನೆಯಲ್ಲಿ ಏನಾದರೂ ಇದೆಯೆ ?

ಶ್ರೀ ಎಸ್.ಆರ್. ಬೊಮ್ಮಾಯಿ.—ವಿಸ್ತರಿಸಲು ಪ್ರಯತ್ನ ಮಾಡುತ್ತೇವೆ.

ನಿಯಮ ೩೩ಳಿರ ಮೇರೆಗೆ

(೩) ಕಂದಾಯ ಇಲಾಖಾ ಅಧಿಕಾರಿಗಳಿಂ ಮುಷ್ಕರ ಹೂಡಾವ ಬಗ್ಗೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳುಬಾಗಿಲು).—ಮಾನ್ಯ ಅಧ್ಯಕ್ಷರೆ, ಕರ್ನಾಟಕದಾದ್ಯಂತ ರೆವಿನ್ಯೂ ಅಧಿಕಾರಿಗಳು ಮುಷ್ಕರ ಮಾಡುವುದಾಗಿ ನೋಟೀಸ್ ಕೊಟ್ಟು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಈಗ ಸರ್ಕಾರದ ಒಂದೊಂದೇ ಡಿಪಾರ್ಟ್‌ಮೆಂಟ್ ಸರದೀಪಾರು ಮುಷ್ಕರ ಹೂಡು ತ್ತಿದ್ದಾರೆ. ಕರ್ನಾಟಕದ ಜನತೆಗೆ ಇಂತಹ ಮುಷ್ಕರಗಳಿಂದಾಗುವ ತೊಂದರೆ ಅಪಾರ, ಈ ಬಗ್ಗೆ ಸರ್ಕಾರ ತುರ್ತು ಕ್ರಮ ಕೈಗೊಂಡು ಮುಷ್ಕರ ನಿಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳೊಡನೆ ಸಂಧಾನ ನಡೆಸಿ ಅಂತಹ ಘಟನೆಗಳನ್ನು ತಪ್ಪಿಸುವುದನ್ನು ಬಿಟ್ಟು ಮುಷ್ಕರ ಹೂಡಿದ ಮೇಲೆ ಸಂಧಾನ ಪ್ರಾರಂಭಿ ಸುವುದು ಸರಿಯಲ್ಲ. ಈ ಬಗ್ಗೆ ರೆವಿನ್ಯೂ ಇಲಾಖೆಯ ಮುಷ್ಕರವನ್ನಾದರೂ ನಿಲ್ಲಿಸಲು ಪ್ರಯತ್ನಿಸಿ ಜನತೆಗೆ ಸಹಾಯ ಮಾಡುವರೆ ? ಮತ್ತು ಇಂಥ ಮುಷ್ಕರಗಳ ಬಗ್ಗೆ ಪೂರ್ವಭಾವಿ ಸಂಧಾನ ನಡೆಸಿ ಜನತೆಗೆ ಸಹಾಯ ಮಾಡುವರೆ ? ಈ ಸಮಸ್ಯೆಯನ್ನು ಸದನದಲ್ಲಿ ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ.